


# ನೀರಕನ್ನಡಿಯ ಪಥ್ಯ

**ಒಂದು ಫೋಟೊ ನೂರೆಂಟು ಕಥೆಗಳನ್ನು ಹೇಳುತ್ತದೆ. ಈ ಫೋಟೊ ವ್ಯಥೆಗಳನ್ನು ಹೇಳುತ್ತಿದೆ. ಆ ವ್ಯಥೆಗಳಿಗೆ ಕಾರಣವಾದ ನಮ್ಮ ನಿಮ್ಮ ನೆರಳುಗಳನ್ನೂ ಕಾಣಿಸುತ್ತಿದೆ.**

**ವಿ.ಆರ್.**

ನೀರು ಕನ್ನಡಿಯೂ ಹೌದು. ಇಲ್ಲಿನ ಫೋಟೊ ನೋಡಿ. ಬೆಟ್ಟ ಗುಡ್ಡಗಳ ತಪ್ಪಲಲ್ಲಿ ನೀರು ನಿಂತಿದೆ. ಕೆರೆಯಂತಿದೆ. ಆ ಕೆರೆಯೇ ಕನ್ನಡಿಯಾಗಿದೆ. ನೀರಹಾಸಿನ ಮೇಲೆ ಮರಗಳು ಕಾಣಿಸುತ್ತಿರುವುದನ್ನು ನೋಡಿದರೆ, ಬಯಲು ಪ್ರದೇಶ ನೀರಿನಿಂದ ಆವೃತವಾಗಿದೆ. ಮರಗಳಷ್ಟೇ ಅಲ್ಲ, ಮನೆಗಳೂ ಜಲಾವೃತವಾಗಿವೆ. ಈ ದೃಶ್ಯವನ್ನು ನೀರಕನ್ನಡಿ ಎಷ್ಟು ಪರಿಣಾಮಕಾರಿಯಾಗಿ ಬಿಂಬಿಸುತ್ತಿದೆ ಗಮನಿಸಿ. ಮರಗಳ ನೆರಳು ನೀರಿನಲ್ಲಾಡುತ್ತಿದೆ. ಆ ನೆಳಲು ಬೆಳಕಿನಾಟ ಗಮನಿಸಿ. ಮರಗಳ ರುಂಡಮುಂಡಗಳು ನೀರಿನಲ್ಲಿ ಪ್ರತಿಫಲಿಸುತ್ತಿವೆ. ಆ ಬಿಂಬಗಳು, ಮರಗಳ ಬೇರುಗಳಂತೆ ಕಾಣಿಸುತ್ತಿವೆ. ಎಂಥ ವಿನೋದ–ವಿರೋಧಾಭಾಸ! ಬೇರುಗಳನ್ನು ನೀರು ಹಿಡಿದಿಡುವುದು ಸಾಧ್ಯವೆ? ಸಾಧುವೆ?

ಕನ್ನಡಿ ಎರಡು ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಒಂದು, ಆಕೃತಿಯನ್ನು ಪ್ರತಿಫಲಿಸುವುದು, ಕಾಣಿಸುವುದು. ಎರಡನೆಯ ಸಾಧ್ಯತೆ: ಕಾಣಿಸುವ ಆಕೃತಿಯ ಮೂಲಕ, ಕಾಣಿಸದ ಒಂದಷ್ಟು ಸೂಕ್ಷ್ಮಗಳ ಬಗ್ಗೆ ಯೋಚಿಸಲು ಹಚ್ಚುವುದು. ನೀರಿನಲ್ಲಿನ ಮರಗಳ ಚಿತ್ರಗಳನ್ನು ನೋಡಿ. ನೀರಕನ್ನಡಿ ಕಾಣಿಸುತ್ತಿರುವುದು ಮರಗಳ ಬೇರುಗಳನ್ನಲ್ಲವಾದರೂ, ಆ ಭ್ರಮೆಯನ್ನಂತೂ ಹುಟ್ಟಿಸುತ್ತಿದೆ. ಇದು, ಮರಗಳ ಭವಿಷ್ಯ ಅತಂತ್ರವಾಗಿರುವುದನ್ನು, ಪ್ರಕೃತಿ ಸಮತೋಲನ ತಪ್ಪಿರುವುದನ್ನು ಸೂಚಿಸುತ್ತಿಲ್ಲವೆ?

ಮರಗಳ ಜೊತೆಗೆ ಮನೆಗಳನ್ನೂ ನೀರು ಆವರಿಸಿಕೊಂಡಿರುವುದನ್ನು ನೋಡಿ, ಪ್ರಕೃತಿ ಮತ್ತು ಮನುಷ್ಯ ಪ್ರಕೃತಿಯ ನಡುವೆ ಇರಬೇಕಾದ ಸೂಕ್ಷ್ಮಗೆರೆ ಅಳಿಸಿಹೋಗುತ್ತಿರುವಂತಿದೆ. ಹೀಗೆ ಕ್ಷೀಣಿಸುವುದು, ಮನುಷ್ಯನ ವಿನಾಶದ ಸಂಕೇತವೆಂದು ಬಿಡಿಸಿ ಹೇಳಬೇಕಾಗಿಲ್ಲ.

ಅಂದಹಾಗೆ, ಈ ಜಲಗನ್ನಡಿಯ ಚಿತ್ರಪಟ ಅಮೆರಿಕದ ಕ್ಯಾಲಿಫೋರ್ನಿಯಾದ ಗಿಲ್‌ರಾಯ್ ಎನ್ನುವ ಪ್ರದೇಶದ್ದು. ಕಳೆದ ವಾರ ಸುರಿದ ಭಾರೀ ಮಳೆಯಿಂದಾಗಿ ಆ ಪ್ರದೇಶದಲ್ಲಿ ಗಂಗಾವತರಣ. ಬಿರುಮಳೆ ಹಾಗೂ ಬಿರುಗಾಳಿ ಉಂಟು ಮಾಡಿದ ಅನಾಹುತ ಅಷ್ಟಿಷ್ಟಲ್ಲ. ಹತ್ತಾರು ಜನ ಜೀವ ಕಳೆದುಕೊಂಡರು. ದೊಡ್ಡ ಪ್ರಮಾಣದ ಆಸ್ತಿಪಾಸ್ತಿ ನಷ್ಟವೂ ವರದಿಯಾಯಿತು. ಪ್ರಕೃತಿ ವಿಕೋಪ ಯಾವ ದೇಶವನ್ನೂ ಬಿಟ್ಟಿಲ್ಲ.

ಮಳೆಯ ನಂತರದ್ದು ರುದ್ರಮೌನ. ಅದು ಅನಾಹುತದ ಲೆಕ್ಕಾಚಾರ ಮಾಡುವ ಸಮಯ. ಈ ಟಿಪ್ಪಣಿಯೊಂದಿಗಿನ ಛಾಯಾಚಿತ್ರ ಮಳೆಯ ಅನಾಹುತಗಳ ಕುರಿತಷ್ಟೇ ಹೇಳುತ್ತಿಲ್ಲ; ಭವಿಷ್ಯದಲ್ಲಿನ ಸಮಸ್ಯೆಗಳತ್ತಲೂ ತನ್ನ ಬಿಂಬದ ಬೆರಳು ಚಾಚಿರುವಂತಿದೆ. ಇದು ಅಮೆರಿಕದ ಛಾಯಾಚಿತ್ರವಾದರೂ, ಇಂಥ ಚಿತ್ರಪಟ ಕಥನಗಳು ನಮ್ಮ ಸುತ್ತಲೂ ಪಿಸುಗುಟ್ಟುತ್ತಲೇ ಇವೆ. ಇಂಥ ಫೋಟೊಗಳನ್ನು ನೋಡಿ, ‘ವಾಹ್’ ಎಂದರೆ ನಮ್ಮ ಸಂವೇದನೆ ನಷ್ಟವಾಗಿದೆ ಎಂದೇ ಅರ್ಥ. ಇವು ನಮ್ಮೊಳಗೆ ಉದ್ದೀಪಿಸಬೇಕಾದುದು ರಸಪ್ರಜ್ಞೆಯನ್ನಲ್ಲ; ಎಚ್ಚರದ ಅರಿವನ್ನು. ಪ್ರಕೃತಿ ಸಮತೋಲನ ತಪ್ಪುವಲ್ಲಿ ನಮ್ಮ ಪಾತ್ರ ಯಾವ ಬಗೆಯದು ಎನ್ನುವ ಅವಲೋಕನಕ್ಕೆ ಇಂಥ ಕೃತಿಗಳು ಕಾರಣವಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in